ಅಧ್ಯಕ್ಷರು: ಆಯಿತು, ಸಭೆ ಕರೆಯಿರಿ.

ಶ್ರೀ ಜಿ. ಕರುಣಾಕರರೆಡ್ಡಿ: O.K. ಮಾಡೋಣ.

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ...

ಅಧ್ಯಕ್ಷರು: ಇದಕ್ಕೇನು ಸಂಬಂಧವಿದೆ? ಇದು ಚಿಕ್ಕಬಳ್ಳಾಪುರದ ವಿಷಯ. Please ಬೇಡ. ನಿಮ್ಮ ಕ್ಷೇತ್ರದ್ದು ಇದರಲ್ಲಿ ಬಂದಿಲ್ಲ. ಇದು ಚಿಕ್ಕಬಳ್ಳಾಪುರ ಜಿಲ್ಲೆಗೆ ಸೀಮಿತವಾಗಿದೆ.

ಶ್ರೀ ಎನ್. ಹೆಚ್. ಶಿವಶಂಕರರೆಡ್ಡಿ: ನನ್ನ ತಾಲ್ಲೂಕಿನಲ್ಲೂ ಕೂಡ 250 ಎಕರೆ acquisition ಆಗಿದೆ. ಎಲ್ಲರಿಗೂ compensation ಕೂಡ ಕೊಟ್ಟಿದ್ದಾರೆ. ಬೇಗ lay out ಮಾಡಬೇಕು. ಈಗಾಗಲೇ 50 ಉದ್ದಿಮೆದಾರರು ಕೂಡ ಉದ್ಯೋಗ ಮಿತ್ರದಲ್ಲಿ registration ಮಾಡಿಸಿದ್ದಾರೆ. ಆದಷ್ಟು ಬೇಗ ಅಲ್ಲಿ lay out ಮಾಡಬೇಕು ಮತ್ತು ಮುಂದುವರಿದು, ಅಲ್ಲಿ ಇನ್ನೂ 900 ಎಕರೆ acquire ಮಾಡಬೇಕೆಂದು ಈಗಾಗಲೇ ಗುರುತಿಸಿದ್ದೇವೆ., ದಯಮಾಡಿ, ಆ 900 ಎಕರೆಯನ್ನುacquire ಮಾಡಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ. ನಿನ್ನೆ ಎಲ್ಲೋ ಒಂದು ಕಡೆ ಪತ್ರಿಕೆಯಲ್ಲಿ ಓದಿದೆ. Infosys ಸಂಸ್ಥೆಯವರು ಲ್ಯಾಂಡ್ ಇಲ್ಲವೆಂದು ಬೇರೆ ರಾಜ್ಯಕ್ಕೆ ಹೋಗುತ್ತಿದ್ದಾರೆಂದು ಪತ್ರಿಕೆಯಲ್ಲಿ ಓದಿದೆ. ಅವರೇನಾದರೂ ಆ ಕಡೆ ಬರುವುದಾದರೆ, ನಾವು ಅಲ್ಲಿ ಭೂಮಿ ಒದಗಿಸಿಕೊಡುತ್ತೇವೆ.

ಅಧ್ಯಕ್ಷರು: ಅವರು ಎಲ್ಲ ಮಾಡಲಿಕ್ಕೆ ರೆಡಿ ಇದೆ ಎಂದು ಹೇಳುತ್ತಾರೆ. ಬೇಗನೆ ಅದನ್ನು develop ಮಾಡಿಸಿ.

ಶ್ರೀ ಜಿ. ಕರುಣಾಕರರೆಡ್ಡಿ: ಆಗಬಹುದು.

ಸಬ್–ರಿಜಿಸ್ಟಾರ್ ಕಛೇರಿ ತೆರೆಯುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**77(169)**
ಸದಸ್ಯರ ಹೆಸರು	:	**ಶ್ರೀ. ನಾಯ್ಕ ಜೆ.ಡಿ. (ಭಟ್ಕಳ)**
ಉತ್ತರಿಸುವ ಸಚಿವರು	:	**ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು)**

ಅ) ಭಟ್ಕಳ ತಾಲ್ಲೂಕಿನಲ್ಲಿ ಸಬ್–ರಿಜಿಸ್ಟಾರ್ ಕಛೇರಿ ಇಲ್ಲದೆ ಆಸ್ತಿ/ಪಾಸ್ತಿಗಳ (ಜಮೀನು) ಕ್ರಯ/ವಿಕ್ರಯದಾರರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಹಾಗಿದ್ದಲ್ಲಿ, ಭಟ್ಕಳದಲ್ಲಿ ಸಬ್-ರಿಜಿಸ್ಟಾರ್ ಕಛೇರಿಯನ್ನು ಯಾವಾಗ ತೆರೆಯಲಾಗುವುದು?

ಸರ್ಕಾರದ ಆದೇಶ ಸಂಖ್ಯೆ. ಕಂಇ 11 ಮುನೋಮು 2007 ದಿನಾಂಕ: 1-9-2007 ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಇಲ್ಲಿಗೆ ಖಾಯಂ ಸಿಬ್ಬಂದಿ ಹಾಗೂ ಹೆಚ್ಚುವರಿ ಅನುದಾನ ಒದಗಿಸುವುದನ್ನು ಬಾಕಿ ಇರಿಸಿ ಇಲಾಖೆಯಲ್ಲಿನ ಸಿಬ್ಬಂದಿಗಳನ್ನು ಮರು ನಿಯೋಜಿಸುವ ಮೂಲಕ ಕೂಡಲೇ ಸದರಿ ಸ್ಥಳದಲ್ಲಿ ಉಪ ನೋಂದಣಿ ಕಛೇರಿಯನ್ನು ತೆರೆಯಲು ಈಗಾಗಲೇ ಅದೇಶಿಸಲಾಗಿದೆ.

ನೋಂದಾಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಉಪ ನೋಂದಣಾಧಿಕಾರಿಗಳ ಮತ್ತು ಸಿಬ್ಬಂದಿಯ ಕೊರತೆಯಿಂದಾಗಿ ಭಟ್ಕಳದಲ್ಲಿ ಉಪ ನೋಂದಣಿ ಕಛೇರಿಯನ್ನು ತೆರೆಯಲು ಸಾಧ್ಯವಾಗಿರುವುದಿಲ್ಲ.

48 ಉಪ ನೋಂದಣಾಧಿಕಾರಿಗಳ ಹುದ್ದೆಗಳ ನೇಮಕಾತಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಕಳುಹಿಸುವಂತೆ ಕರ್ನಾಟಕ ಲೋಕ ಸೇವಾ ಆಯೋಗವನ್ನು ದಿನಾಂಕ : 23-10-2007ರ ಪತ್ರದಲ್ಲಿ ಕೋರಲಾಗಿದ್ದು, ಆದರಂತೆ ಆಯೋಗವು ಅರ್ಜಿಗಳನ್ನು ಸ್ವೀಕರಿಸಿದ್ದು, ಆಯ್ಕೆ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.

ಉಪ ನೋಂದಣಾಧಿಕಾರಿಗಳ ನೇಮಕಾತಿ ನಂತರ, ಸಿಬ್ಬಂದಿಯನ್ನು ಮರು ವಿನ್ಯಾಸಗೊಳಿಸುವುದರ ಮೂಲಕ ಭಟ್ಕಳದಲ್ಲಿ ಉಪ ನೋಂದಣಿ ಕಛೇರಿ ಪ್ರಾರಂಭಿಸಲಾಗುವುದು.

ಶ್ರೀ ಜೆ.ಡಿ. ನಾಯ್ಕ: ನಾನು Sub registrar ಕಛೇರಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ಏಕೆಂದರೆ, ನಾವು ಈಗ ಎಲ್ಲಾ ವ್ಯವಹಾರಕ್ಕೂ ಹೊನ್ನಾವರ ತಾಲ್ಲೂಕಿಗೆ ಹೋಗಬೇಕಾಗಿದ್ದು, ಸುಮಾರು 40 ಕಿ.ಮೀ. ಅಂತರವಿದೆ, ಆಸ್ತಿ ವ್ಯವಹಾರವಿರಬಹುದು, ಬ್ಯಾಂಕಿಗೆ ಸಂಬಂಧಪಟ್ಟ ವ್ಯವಹಾರವಿರಬಹುದು, ಆಶ್ರಯ ಮನೆಗಳಿಗೆ registration ಮಾಡಲಿಕ್ಕೆ ಕೂಢ ಆ ಫಲಾನುಭವಿಗಳು 100, 200 ರೂ. ಖರ್ಚು ಮಾಡಿ ಹೊನ್ನಾವರ ತಾಲ್ಲೂಕಿಗೆ ಹೋಗಬೇಕಾಗುತ್ತದೆ. ಅದಕ್ಕಾಗಿ, ಹೊನ್ನಾವರ ತಾಲ್ಲೂಕು ಬದಲಾಗಿ ಭಟ್ಕಳ ತಾಲ್ಲೂಕಿನಲ್ಲಿ Sub registrar Office open ಮಾಡಿ ಎಂದು ಕೇಳಿದ್ದೆ. ಅದಕ್ಕೆ ಸರ್ಕಾರದಿಂದ 1-9-07ಕ್ಕೆ Sub Registrar Office ಮಂಜೂರಾಗಿದೆ. ಆದರೆ, ಅದನ್ನೇಕೆ ಓಪನ್ ಮಾಡುತ್ತಿಲ್ಲವೆಂದು ಕೇಳಿದರೆ, ಅಲ್ಲಿ ಅನುದಾನವನ್ನು ಬದಿಗಿರಿಸಿ, ಬಾಕಿ ಇರುವ ಸಿಬ್ಬಂದಿಯನ್ನೊದಗಿಸಬೇಕೆಂದು ಹೇಳುತ್ತಾರೆ. ಭಟ್ಕಳದಲ್ಲಿ ಕಛೇರಿಯಾದರೆ, ಹೊನ್ನಾವರದಲ್ಲಿ 100% work ಕಡಿಮೆಯಿರುತ್ತದೆ, atleast, ಮೂರು ದಿವಸ ಹೊನ್ನಾವರ, ಮೂರು ದಿವಸ ಭಟ್ಕಳದಲ್ಲಿ ಎಂದು ಮಾಡಿದರೆ,

atleast ಭಟ್ಕಳದ ಕೆಲಸ, ಹೊನ್ನಾವರದ ಕೆಲಸವೂ ಆಗುತ್ತದೆ. ಇದಕ್ಕಾಗಿ ಈಗಾಗಲೇ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಬರೆದಿದ್ದೇವೆ, Sub Registrar ನೇಮಕಾತಿ ನಂತರ ಮಾಡುತ್ತೇವೆ, ಎಷ್ಟು ದಿವಸ ಹಿಡಿಯುತ್ತದೆಂದು ಹೇಳಿಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ನಾನು ಕಂದಾಯ ಸಚಿವರಿಗೆ ಮನವಿ ಮಾಡುತ್ತೇನೆ, ನೀವು ಆ ಕಛೇರಿಯನ್ನು ಎಷ್ಟು ದಿವಸದೊಳಗೆ ಓಪನ್ ಮಾಡುತ್ತೀರಿ ಎಂದು ಹೇಳಬೇಕಾಗುತ್ತದೆ. ಇಲ್ಲದಿದ್ದರೆ alternative ವ್ಯವಸ್ಥೆ ಮಾಡಿ.

ಅಧ್ಯಕ್ಷರು: ನಾನು ಸಹ ಕಂದಾಯ ಸಚಿವನಾಗಿದ್ದಾಗ ಭಟ್ಕಳಕ್ಕೆ Sub Registrar ಕಛೇರಿ ಮಂಜೂರು ಮಾಡಿದ್ದರು. ಅದು ಇನ್ನೂ implement ಆಗಲಿಲ್ಲ. ಅದನ್ನೇ ಅವರು ಹೇಳುತ್ತಿದ್ದಾರೆ.

ಶ್ರೀ ಜಿ. ಕರುಣಾಕರರೆಡ್ಡಿ: ಭಟ್ಕಳ ಒಂದೇ ಅಲ್ಲ ರಾಜ್ಯದ 9 ಕಡೆ ತಾವು ಕಂದಾಯ ಸಚಿವರಾಗಿದ್ದಾಗ ಮಂಜೂರು ಮಾಡಿದ್ದೀರಿ. ಆದರೂ ಕೂಡ, ಲೋಕಸೇವಾ ಆಯೋಗ ಈಗಾಗಲೇ ಅರ್ಜಿ ಸ್ವೀಕಾರ ಮಾಡಿದ್ದಾರೆ, ಆ Process ನಡೆಯುತ್ತಿದೆ. ಅದಾದ ಕೂಡಲೇ, ಅಲ್ಲಿ ನಮ್ಮ ಸಿಬ್ಬಂದಿಯನ್ನೊದಗಿಸಿ ಆ 9 ಕಛೇರಿಗಳನ್ನೂ ಬೇಗ ಪ್ರಾರಂಭ ಮಾಡುವುದಕ್ಕೆ Process ಮಾಡುತ್ತೇವೆ.

ಅಧ್ಯಕ್ಷರು: ಬೇಗ ಮಾಡಿಸಿ. ಸರಿ.

ಶ್ರೀ ಜೆ.ಡಿ. ನಾಯ್ಕ: ಹೊನ್ನಾವರದಲ್ಲಿರುವ ಕಛೇರಿಯನ್ನು ಇಲ್ಲಿ ಭಟ್ಕಳದಲ್ಲಿ ಖಾಯಂ ಕಛೇರಿಯಾಗಿ ಓಪನ್ ಮಾಡಿ, ಹೊನ್ನಾವರದಲ್ಲಿರುವ Sub Registrar ರವರನ್ನು ವಾರಕ್ಕೆ ಮೂರು ದಿವಸ ಭಟ್ಕಳ, ಮೂರು ದಿವಸ ಹೊನ್ನಾವರ ಎಂದು ಮಾಡಿದರೆ ಒಳ್ಳೆಯದು. Atleast ಸಂಚಾರಿ ವ್ಯವಸ್ಥೆಯನ್ನು ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ.

ಶ್ರೀ ಜಿ. ಕರುಣಾಕರರೆಡ್ಡಿ: ಅದರ ಸಾಧ್ಯಾಸಾಧ್ಯತೆಗಳ ಬಗ್ಗೆ ಪರಿಶೀಲಿಸುತ್ತೇನೆ.

ಶ್ರೀ ಪ್ರಕಾಶ್ ಹುಕ್ಕೇರಿ: ಬೆಳಗಾಂ ಜಿಲ್ಲೆಯ ಸದಲಗದಲ್ಲಿ ಕಟ್ಟಡ ಕಟ್ಟುವುದಕ್ಕೆ ತಾವೇ 10 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಿರಿ. ಇನ್ನೂ ಕಟ್ಟಡ ಪೂರ್ತಿಯಾಗಿಲ್ಲ. 2 ವರ್ಷಗಳಾಯಿತು.

ಅಧ್ಯಕ್ಷರು: ಆಯಿತು. ಅದನ್ನು Separate ಆಗಿ ಕೇಳಿ.

ಶ್ರೀ ಜೆ.ಡಿ. ನಾಯ್ಕ: ಆದಷ್ಟು ಬೇಗ ಇನ್ನು ಎಷ್ಟು ದಿವಸಗಳಲ್ಲಿ ಮಾಡುತ್ತೇನೆಂದು ಹೇಳಿದರೆ ಅನುಕೂಲವಾಗುತ್ತದೆ. ಆದಷ್ಟು ಬೇಗ ಮಾಡಿದರೆ ಅನುಕೂಲವಾಗುತ್ತದೆ. ಅದಕ್ಕೆ ನಾನು ಕೇಳುತ್ತಿದ್ದೇನೆ.

ಶ್ರೀ ಜಿ. ಕರುಣಾಕರರೆಡ್ಡಿ: ಖಂಡಿತ ಆ ರೀತಿ ಕ್ರಮ ತೆಗೆದುಕೊಂಡು ತಮಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿಸಿ ಕೊಡುತ್ತೇನೆ.

ಶ್ರೀ ಬಿ. ಪ್ರಕಾಶ್ ಹುಕ್ಕೇರಿ: ಮಾನ್ಯ ಅಧ್ಯಕ್ಷರೆ ನಾವು ಕೇಳುತ್ತೇನೆ.

ಅಧ್ಯಕ್ಷರು: No, no. ಅವರು ಭಟ್ಕಳಕ್ಕೆ ಸಂಬಂಧಪಟ್ಟ ಹಾಗೆ ಕೇಳಿದ್ದಾರೆ. (ಗೊಂದಲ) ಬೇರೆ ಬೇರೆ ಕ್ಷೇತ್ರಗಳ ಬಗ್ಗೆ ಕೇಳುವುದಕ್ಕೆ ಅವಕಾಶ ಕೊಡುವುದಿಲ್ಲ.

ಕಾವೇರಿ ನೀರಾವರಿ ನಿಗಮ ಬಾಕಿ ಇರುವ ಬಿಲ್ಲುಗಳ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 79(161)

ಸದಸ್ಯರ ಹೆಸರು : ಶ್ರೀ. ರೇವಣ್ಣ.ಹೆಚ್.ಡಿ. (ಹೊಳೇನರಸಿಪುರ)

ಉತ್ತರಿಸುವ ಸಚಿವರು : ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಅ. ರಾಜ್ಯದ ಜಲ ಸಂಪನ್ಮೂಲ ಇಲಾಖೆಯು ಕಾವೇರಿ ನೀರಾವರಿ ನಿಗಮದ ವತಿಯಿಂದ ಕೈಗೊಂಡ ಕಾಮಗಾರಿಗಳಿಗಾಗಿ ಕಳೆದ 3 ವರ್ಷಗಳಿಂದ ಬಾಕಿ ಇರುವ ಬಿಲ್ಲುಗಳ ಮೊತ್ತವೆಷ್ಟು? (ವರ್ಷವಾರು, ಕಾಮಗಾರಿವಾರು ವಿವರ ನೀಡುವುದು)

ಕಾವೇರಿ ನೀರಾವರಿ ನಿಗಮದ ವತಿಯಿಂದ ಕೈಗೊಂಡ ಕಾಮಗಾರಿಗಳಿಗಾಗಿ ಕಳೆದ 3 ವರ್ಷಗಳಿಂದ ಪಾವತಿಗಾಗಿ ಬಾಕಿ ಬಿಲ್ಲುಗಳ ವಿವರ ಕೆಳಕಂಡಂತಿದೆ:

2005–06 ನೇ ಸಾಲಿನ ಬಾಕಿ ಬಿಲ್ಲುಗಳು ಇರುವುದಿಲ್ಲ.

2006–07 ನೇ ಸಾಲಿನ ಬಾಕಿ ಬಿಲ್ಲುಗಳು ಇರುವುದಿಲ್ಲ.

2007–08 ನೇ ಸಾಲಿನ ಮಾರ್ಚ್ 31 2008ಕ್ಕೆ ಪಾವತಿಗೆ ಬಾಕಿ ಇದ್ದ ಬಿಲ್ಲುಗಳ ಮೊತ್ತ ರೂ. 190.25 ಕೋಟಿಗಳು.

ದಿನಾಂಕ: 31–03–2008ಕ್ಕೆ ಬಾಕಿ ಇರುವ 2007–08ನೆ ಸಾಲಿನ ಬಿಲ್ಲುಗಳ ವಿವರಗಳು ಕೆಳಕಂಡಂತಿದೆ:

ವಲಯ	ಬಿಲ್ಲುಗಳ ಸಂಖ್ಯೆ	ಮೊತ್ತ (ರೂ.ಕೋಟಿಗಳಲ್ಲಿ)
ನೀರಾವರಿ(ದ)ವಲಯ, ಮೈಸೂರು	1745	62.93
ಹೇಮಾವತಿ ಯೋಜನಾ ವಲಯ,ಗೊರೂರು	694	104.52
ಹೇಮಾವತಿ ನಾಲಾ ವಲಯ, ತುಮಕೂರು	580	22.80
ಒಟ್ಟು	**3019**	**19.25**